<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮಾದಕದ್ರವ್ಯ ಪ್ರಕರಣಗಳ ವಿಶೇಷ ನ್ಯಾಯಾಲಯ, ಕೋಲಾರ</u>

**Spl. C. (NDPS) 24/2022**

ಫ್ರಾಸಾಃ **03** ಚಾಸಾಃ **13**
ದಿನಾಂಕಃ **20-02-2026**

| | |
|---|---|
| ಹೆಸರು | :: ನಾಗರತ್ನ |
| ಗಂಡನ ಹೆಸರು | :: ಶಿವಪ್ಪ |
| ವಯಸ್ಸು | :: 55 ವರ್ಷ |
| ಉದ್ಯೋಗ | :: ಪಿಎಸ್ಐ, ಸಂಚಾರಿ ಪೋಲೀಸ್ ಠಾಣೆ |
| ವಾಸ ಸ್ಥಳ | :: ಕೋಲಾರ |

<u>ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಗಕರಾದ ಮಾಧವ ಪದ್ಮನಾಭ ಗಾವಂಕರ್ ರವರಿಂದಃ</u>

1. ನಾನು ದಿನಾಂಕ 01.05.2021 ರಿಂದ 13.07.2023 ವರೆಗೂ ಕೋಲಾರದ ಗ್ರಾಮಾಂತರ ಪೋಲೀಸ್ ಠಾಣೆಯ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 21.09.2021 ರಂದು ಮಧ್ಯಾಹ್ನ 2.30 ಕ್ಕೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಫ್ರಾಸಾ 2 ರವರು ಠಾಣೆಗೆ ಹಾಜರಾಗಿ ನ್ಯಾಯಾಲಯದ ಮುಂದಿರುವ ಆರೋಪಿ, ಒಂದು ಜ್ಞಾಪನಾ ಪತ್ರ, ಒಂದು ಮಹಜರು, ನಿ ಪಿ 3 ನೋಟೀಸು ಮತ್ತು 'MR' ಎಂಬ ಮೊಹರಿನಿಂದ ಸೀಲು ಮಾಡಿದ ಒಂದು ಬಿಳಿ ಚೀಲವನ್ನು ನೀಡಿದರು. ಆ ಚೀಲದಲ್ಲಿ 1.196 ಕೆ.ಜಿ ಗಾಂಜಾ ಇತ್ತು. ಅದರ ಜೊತೆಗೆ ಅದೇ ಮೊಹರಿನಿಂದ ಸೀಲ್ ಆಗಿದ್ದ ಇನ್ನೂ ಎರಡು ಬ್ಯಾಗುಗಳನ್ನು ನೀಡಿದರು. ಒಂದು ಚೀಲದಲ್ಲಿ ಬಂಗಾರದಂತಹ 4 ನೆಕ್ಲೇಸುಗಳು, 1 ಚೈನು, 1 ಬ್ರಾಸ್ ಲೈಟ್, 3 ಜೊತೆ ಓಲೆ ಹಾಗೂ ಹ್ಯಾಂಗಿನ್ಸ್ 5 ಉಂಗುರಗಳು, 2 ಜೊತೆ ಕಿವಿಯ ಡ್ರಾಪ್ಸ್ ಬೆಳ್ಳಿ ತರಹದ 1 ಉಂಗುರ ಇರುವುದಾಗಿ ಫ್ರಾಸಾ 2 ರವರು ತಿಳಿಸಿದರು. ಮತ್ತೊಂದು ಬ್ಯಾಗಿನಲ್ಲಿ ರೂ.43,000/- ಇರುವುದಾಗಿ ಫ್ರಾಸಾ 2 ಇವರು ತಿಳಿಸಿದರು. ಜ್ಞಾಪನಾ ಪತ್ರದ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಖ್ಯೆ 386/2021 ರಲ್ಲಿ ಪ್ರಕರಣ ದಾಖಲಿಸಿದೆ. ಈಗ ತೋರಿಸಿದ ದಾಖಲೆಗಳು ಫ್ರಾಸಾ 2 ರವರು ನೀಡಿದ ಜ್ಞಾಪನಾ ಪತ್ರ, ಮಹಜರು ಮತ್ತು ನಾನು ನೋಂದಾಯಿಸಿದ ಪ್ರಥಮ ವರ್ತಮಾನ ವರದಿ ಇವೆ. ಜ್ಞಾಪನಾ ಪತ್ರ ಮತ್ತು ಮಹಜರು ಈಗಾಗಲೇ ನಿ ಪಿ 4 ಮತ್ತು 1 ಎಂದು ಕ್ರಮವಾಗಿ ಗುರುತಿಸಲಾಗಿದ್ದು, ಪ್ರಥಮ

ವರ್ತಮಾನ ವರದಿಯನ್ನು ನಿ ಪಿ 5 ಎಂದು ಗುರುತಿಸಲಾಯಿತು. ನಿ ಪಿ 1 ನ್ನು ಸ್ವೀಕರಿಸಿದ್ದಕ್ಕೆ ಅದಕ್ಕೆ ಸಹಿ ಮಾಡಿದ್ದೇನೆ. ನಿ ಪಿ 1, 4 ಮತ್ತು 5 ಇವುಗಳಲ್ಲಿನ ಸಾಕ್ಷಿದಾರರ ಸಹಿಯನ್ನು ನಿ ಪಿ 1(ಸಿ), 4(ಬಿ) ಮತ್ತು 5(ಎ) ಎಂದು ಗುರುತಿಸಲಾಯಿತು. ನಿ ಪಿ 4 ಮತ್ತು 5 ನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆ

2. ಫ್ರಾಸಾ 2 ರವರು ಹಾಜರು ಪಡಿಸಿದ ಮುದ್ದೆ ಮಾಲುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 199/2021 ರಲ್ಲಿ ನಮೂದಿಸಿದೆ. ಸದರಿ ಮಾಲುಪಟ್ಟಿ ಈಗ ತೋರಿಸಿದ್ದು ಇದ್ದು, ಅದನ್ನು ನಿ ಪಿ 6 ಎಂದು ಗುರುತಿಸಲಾಯಿತು. ಆರೋಪಿಯನ್ನು ದಸ್ತಗಿರಿ ಮಾಡಿ ಆತನ ಸ್ವ-ಇಚ್ಛಾ ಹೇಳಿಕೆ ಪಡೆದೆ. ಅದೇ ದಿವಸ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಅದೇ ದಿನ ಸಾಕ್ಷಿದಾರರಾದ ಚಾಸಾ 2 ರಿಂದ 8 ಇವರ ಹೇಳಿಕೆಗಳನ್ನು ಪಡೆದೆ.

3. ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಗಾಂಜಾವನ್ನು ಠಾಣೆಯ ಪ್ರತ್ಯೇಕ ಕೊಠಡಿಯಲ್ಲಿ ಇಟ್ಟಿದ್ದೆ ಮತ್ತು ಕೊಠಡಿಗೆ ಬೀಗ ಹಾಕಿದ್ದೆ. ದಿನಾಂಕ 05.10.2021 ರಂದು ಇನ್ ವೆಂಟ್ರಿ ಮಾಡಿಸುವ ಸಲುವಾಗಿ ಸದರಿ ಮುದ್ದೆ ಮಾಲನ್ನು ತೆಗೆದುಕೊಂಡು ಮಾನ್ಯ 1 ನೇ ಅಪರ ಹಿರಿಯ ಸಿವಿಲ್ ಮತ್ತು ಸಿಜೆಎಂ ನ್ಯಾಯಾಧೀಶರು ಇವರ ಮುಂದೆ ಹಾಜರು ಪಡಿಸಿದೆ. ಸದರಿ ಚೀಲವನ್ನು ನ್ಯಾಯಾಧೀಶರ ಮುಂದೆ ತೂಕ ಮಾಡಿದೆ. ಅದು 1.3 ಕೆ.ಜಿ ತೂಗಿತು. ಸದರಿ ಚೀಲವನ್ನು ಬಿಚ್ಚಿದೆ ಮತ್ತು ಅದರಲ್ಲಿ ಒಣಗಿದ ಗಾಂಜಾ ಇತ್ತು. ಮಾನ್ಯ ನ್ಯಾಯಾಧೀಶರ ಸಮಕ್ಷಮ ತಲಾ 100 ಗ್ರಾಂ. ನಂತೆ ಎರಡು ಪ್ಲಾಸ್ಟಿಕ್ ಡಬ್ಬಗಳಲ್ಲಿ ಸ್ಯಾಂಪಲ್ ಗಾಂಜಾವನ್ನು ಸಂಗ್ರಹಿಸಿದೆ. ನಂತರ ಆ ಡಬ್ಬಗಳನ್ನು ಬಿಳಿ ಬಟ್ಟೆ ಚೀಲಗಳಲ್ಲಿ ಪ್ರತ್ಯೇಕವಾಗಿ ಹಾಕಿ ‘MR’ ಎಂಬ ಮೊಹರಿನಿಂದ ಸೀಲ್ ಮಾಡಿದೆ. ಆ ಡಬ್ಬಗಳಿಗೆ ಕ್ರಮ ಸಂಖ್ಯೆ A ಮತ್ತು B ಎಂದು ನೀಡಿದೆ. ಆ ಡಬ್ಬಗಳಿಗೆ ನನ್ನ ಮತ್ತು ನ್ಯಾಯಾಧೀಶರ ಸಹಿ ಇರುವ ಚೀಟಿಯನ್ನು ಅಂಟಿಸಿದೆ. ಸದರಿ ಸ್ಯಾಂಪಲ್‌ಗಳು ಈಗ ತೋರಿಸಿದ್ದು ಇವೆ. ಅವುಗಳನ್ನು ಮು ಮಾಲು 1 ಮತ್ತು 2 ಎಂದು ಗುರುತಿಸಲಾಯಿತು. ಮು ಮಾಲು 1 ಎಂದು ಗುರುತಿಸಿದ ಸ್ಯಾಂಪಲನ್ನು ಎಫ್.ಎಸ್.ಎಲ್ ಪರೀಕ್ಷೆಗೆ ಕಳುಹಿಸಿದ್ದೇನೆ. ಇನ್ ವೆಂಟ್ರಿ ಸಮಯದಲ್ಲಿ ಈಗ ತೋರಿಸಿದ ಛಾಯಾಚಿತ್ರಗಳನ್ನು ತೆಗೆಸಿದ್ದೇನೆ. ಇನ್‌ವೆಂಟ್ರಿ ಸಮಯದಲ್ಲಿ ಮಾನ್ಯ ನ್ಯಾಯಾಧೀಶರು ಮಾಡಿದ ಪ್ರೊಸೀಡಿಂಗ್ಸ್ ಈಗ ತೋರಿಸಿದ್ದು ಇವೆ. ಅವುಗಳನ್ನು ನಿ ಪಿ 7 ರಿಂದ 21 ಎಂದು ಗುರುತಿಸಲಾಯಿತು. ಸ್ಯಾಂಪಲ್ ತೆಗೆದ ನಂತರ ಉಳಿದ ಬಲ್ಕ್ ಗಾಂಜಾವನ್ನು ಪುನಃ ಪ್ಯಾಕ್ ಮಾಡಿ, ಸೀಲು ಮಾಡಿದೆ. ಸ್ಯಾಂಪಲ್ ಹಾಗೂ ಬಲ್ಕ್ ಗಾಂಜಾವನ್ನು ತೆಗೆದುಕೊಂಡು

ಠಾಣೆಗೆ ಬಂದೆ. ಸ್ಯಾಂಪಲ್‌ಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 225/2021 ರಲ್ಲಿ ನಮೂದಿಸಿದೆ. ಸದರಿ ಪಿ.ಎಫ್ ಈಗ ತೋರಿಸಿದ್ದು ಇದೆ. ಅದನ್ನು ನಿ ಪಿ 22 ಎಂದು ಗುರುತಿಸಲಾಯಿತು.

4. ದಿನಾಂಕ 05.10.2021 ರಂದು ಇನ್‌ವೆಂಟ್ರಿ ಸಮಯದಲ್ಲಿ ಮತ್ತು ಪಂಚನಾಮೆ ಸಮಯದಲ್ಲಿ ತೆಗೆದ ಫೋಟೋಗಳಿಗೆ ಸಂಬಂಧಿಸಿದಂತೆ ಚಾಸಾ 10 ರವರಿಂದ ಪ್ರಮಾಣಪತ್ರ ಪಡೆದೆ. ಸದರಿ ಪ್ರಮಾಣ ಪತ್ರವನ್ನು ನಿ ಪಿ 23 ಎಂದು ಗುರುತಿಸಲಾಯಿತು. ದಿನಾಂಕ 21.10.2021 ರಂದು ಚಾಸಾ 11 ಇವರ ಮೂಲಕ ಮು ಮಾಲು 1 ನ್ನು ಪರೀಕ್ಷೆಗೆ ಎಫ್.ಎಸ್.ಎಲ್ ಬೆಂಗಳೂರಿಗೆ ಕಳುಹಿಸಿಕೊಟ್ಟೆ ಮತ್ತು ಅವರು ನೀಡಿದ ಸ್ವೀಕೃತಿಯನ್ನು ಸ್ವೀಕರಿಸಿದೆ. ಚಾಸಾ 11 ಇವರ ಹೇಳಿಕೆ ಪಡೆದೆ. ದಿನಾಂಕ 16.05.2022 ರಂದು ಎಫ್.ಎಸ್.ಎಲ್ ನಿಂದ ವರದಿಯನ್ನು ಸ್ವೀಕರಿಸಿದೆ ಮತ್ತು ಅದು ಈಗ ತೋರಿಸಿದ್ದು ಇದೆ. ಸದರಿ ವರದಿ ಮತ್ತು ಸ್ಯಾಂಪಲ್ ಸೀಲನ್ನು ಒಟ್ಟಾಗಿ ನಿ ಪಿ 24 ಎಂದು ಗುರುತಿಸಲಾಯಿತು. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ.

<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಎಂ.ಎ ವಕೀಲರಿಂದಃ</u>

5. ನನ್ನ ತನಿಖೆಯಲ್ಲಿ ಮುಖ್ಯವಾದ ಆರೋಪಿ ಗೌಸ್ ಎಂದು ಕಂಡು ಬಂದಿದೆ ಎಂದರೆ ಸರಿಯಲ್ಲ. ಪ್ರಥಮ ವರ್ತಮಾನ ವರದಿ ಪ್ರಕಾರ ಸರಕನ್ನು ಗೌಸ್ ಈತ ಆರೋಪಿಗೆ ಕೊಡುತ್ತಿದ್ದ ಎಂದು ಇದೆ ಎಂದರೆ ಸರಿ.

6. ಈ ಪ್ರಕರಣಕ್ಕೂ ಮೊದಲು ಬೇರೆ ಪ್ರಕರಣದಲ್ಲೂ ಗಾಂಜಾವನ್ನು ಸೀಜ್ ಮಾಡಿದ್ದೇನೆ. ಜ್ಞಾಪನಾ ಪತ್ರದ ಪ್ರಕಾರ ಫ್ರಾಸಾ 2 ರವರು ಹಾಜರು ಪಡಿಸಿದ ಮುದ್ದೆ ಮಾಲುಗಳು ಹೊಲದಲ್ಲಿ ಇದ್ದವು. ಆ ಹೊಲ ಯಾರಿಗೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿದಾರರು ಅದು ಆರೋಪಿಯ ಮನೆಯ ಮುಂದಿನ ಹೊಲ ಇದ್ದು, ಅದು ಆತನಿಗೆ ಸಂಬಂಧಿಸಿದ್ದಿದೆ ಎನ್ನುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ದಾಖಲಾತಿ ಏನಾದರೂ ಸಂಗ್ರಹಿಸಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎನ್ನುತ್ತಾರೆ. ನೀವು ಹೇಳಿದ ಮನೆ ಆರೋಪಿಯದ್ದು ಎಂದು ತೋರಿಸಲು ಯಾವುದಾದರೂ ದಾಖಲೆ ಸಂಗ್ರಹಿಸಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎನ್ನುತ್ತಾರೆ. ಆರೋಪಿಯ ಮನೆ ಇರುವುದು ಕೋಲಾರ ನಗರದಲ್ಲಿ ಎಂದರೆ ಸರಿಯಲ್ಲ. ಆರೋಪಿಯ ಮನೆಯಿಂದ ಹಣ ಮತ್ತು

ಒಡವೆಯನ್ನು ತೆಗೆದುಕೊಂಡು ಹೋಗಿ ಸೀಜ್ ಮಾಡಿದ್ದೇವೆ ಎಂದರೆ ಸರಿಯಲ್ಲ. ಬೇರೆ ಕಡೆಯಿಂದ ಗಾಂಜಾವನ್ನು ಸೇರಿಸಿ ಕೇಸನ್ನು ಬನಾವಟ್ಟು ಮಾಡಿದ್ದೇವೆ ಎಂದರೆ ಸರಿಯಲ್ಲ.

7. ಬೀಜ, ಕಾಂಡ, ಹೂವು, ಎಲೆ ಎಲ್ಲಾ ಸೇರಿಸಿ ಅದರ ತೂಕ 1.196 ಕೆಜಿ ಇತ್ತು. ಗಾಂಜಾವನ್ನು ನಾನು ಇನ್‌ವೆಂಟ್ರಿ ಸಮಯದಲ್ಲಿ ನೋಡಿದ್ದೇನೆ. ಆಗ ಅದು ಒಣಗಿತ್ತು. ಮಾನ್ಯ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದಾಗ ಸದರಿ ಗಾಂಜಾದ ತೂಕ 1.3 ಕೆಜಿ ಇತ್ತು. ಇನ್ ವೆಂಟ್ರಿ ಮಾಡಿಸಲು ಮೌಖಿಕವಾಗಿ ಮಾನ್ಯ ನ್ಯಾಯಾಧೀಶರಿಗೆ ವಿನಂತಿಸಿದೆ. ಸ್ಯಾಂಪಲ್ ತೆಗೆದ ನಂತರ ಉಳಿದ ಬಲ್ಕ್ ಗಾಂಜಾವನ್ನು ತೂಕ ಮಾಡಿಲ್ಲ.

8. ಮುದ್ದೆ ಮಾಲೆಲ್ಲಾ ಸಿಕ್ಕಿದೆ ಎಂದು ಹೇಳಿದ ಜಮೀನಾಗಲೀ ಅಥವಾ ಹತ್ತಿರದ ಮನೆಯಾಗಲೀ ಆರೋಪಿಗೆ ಸೇರಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಕೇಸು ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ**,** ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.**)**

**ಓ. ಹೇ. ಕೇ. ಸ. ಇದೆ,**

**(**ವಿಜಯಕುಮಾರ್ ಎಂ. ಆನಂದಶೆಟ್ಟಿ**)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ